

◆ **ಬೇರೆ ಭಾಷೆಯ ಸಿನಿಮಾರಂಗಕ್ಕೆ ಹೋಗುತ್ತಿದ್ದಂತೆ ನೆಗೆಟಿವ್ ಕಮೆಂಟ್ ಕೂಡ ಕೇಳಿಬರುತ್ತದೆ. ಇದಕ್ಕೆ ನಿಮ್ಮ ಉತ್ತರ ಏನಾಗಿರುತ್ತದೆ?**

ನೆಗೆಟಿವ್ ಕಮೆಂಟ್‌ಗಳ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ. ಎಲ್ಲಿ ಕಥೆ ಚೆನ್ನಾಗಿರುತ್ತೋ, ಪ್ರೊಡಕ್ಷನ್ ಚೆನ್ನಾಗಿರುತ್ತೋ ಅಲ್ಲಿ ಕೆಲಸ ಮಾಡಬೇಕು. ಬಂದ ಉತ್ತಮ ಅವಕಾಶಗಳನ್ನು ಬಿಡುವುದು ಮೂರ್ಖತನ. ಕಲೆ ಒಂದು ಭಾಷೆಗೆ ಸೀಮಿತವಲ್ಲ. ಕಲೆಯೇ ವಿಶ್ವವ್ಯಾಪಿ. ಅಂದಮೇಲೆ ನಮಗೆ ನಾವೇ ಬೇಲಿ ಯಾಕೆ ಹಾಕಿಕೊಳ್ಳಬೇಕು? ನಮಗೆ ನಾವು ನಿರ್ಬಂಧ ಹಾಕಿಕೊಂಡರೆ ನಮಗೇ ಹಿನ್ನಡೆ. ಹೊಸತನಗಳಿಗೆ ತೆರೆದುಕೊಂಡಷ್ಟೂ ಅವಕಾಶಗಳೂ ಹೆಚ್ಚುತ್ತವೆ. ನಮಗೆ ನಾವು ಫಿಲ್ಟರ್ ಹಾಕಿಕೊಂಡರೆ ಅವಕಾಶಗಳು ಕೂಡ ಕಡಿಮೆಯಾಗುತ್ತವೆ. ನನಗೆ ತಮಿಳು ಭಾಷೆಯ ಅರಿವೇ ಇರಲಿಲ್ಲ. ಇಲ್ಲಿಗೆ ಬಂದು ಡೈಲಾಗ್ಸ್ ಕಲಿತಾ ಇದ್ದೀನಿ. ಹಾಗೆ ಏಕಾಏಕಿ ಕಲಿತು ನಟಿಸುವುದು ಒತ್ತಡ ಎನಿಸಿದರೂ ಹೊಸದನ್ನು ಕಲಿತ, ಹೊಸ ಪ್ರಯೋಗದ ಖುಷಿಯಿದೆ. ಎಲ್ಲಿ ಹೋದರೂ ಜನ ಒಂದೇ. ಮನಸ್ಥಿತಿ–ಎಮೋಷನ್ ಒಂದೇ. ಅದಕ್ಕಾಗೇ ಎಲ್ಲಿದ್ದವರು ಎಲ್ಲಿಗೋ ಹೋದರೂ ಬದುಕಲು ಸಾಧ್ಯ. ಅದು ಸಿನಿಮಾರಂಗಕ್ಕೂ ಅನ್ವಯ.

◆ **'ಸಪ್ತಸಾಗರದಾಚೆ ಎಲ್ಲೋ' ಆದ ನಂತರ ನಿಮ್ಮ ಹಾದಿಯಲ್ಲಿ ಏನೆಲ್ಲಾ ಬದಲಾಯಿತು?**

'ಸಪ್ತಸಾಗರದಾಚೆ ಎಲ್ಲೋ' ಒಂದು ಅತ್ಯುತ್ತಮ ಅವಕಾಶವಾಯಿತು. ಅದಾದ ನಂತರವೂ ಸಿನಿಮಾ ಆಯ್ಕೆಯಲ್ಲಿ ಒಂದೇ ಮನಸ್ಥಿತಿಯನ್ನು ಕಾಯ್ದುಕೊಂಡಿದ್ದೇನೆ. ಕಥೆ ಚೆನ್ನಾಗಿದೆಯಾ, ನನ್ನ ಪಾತ್ರಕ್ಕೆ ಒತ್ತು ಇದೆಯಾ ನೋಡುತ್ತೇನೆ. ದೊಡ್ಡ ಪ್ರೊಡಕ್ಷನ್‌ನಲ್ಲಿ ಮಾತ್ರ ಸಿನಿಮಾ ಮಾಡುತ್ತೇನೆ ಎಂದಿಲ್ಲ. ಸಿನಿಮಾ ಮಾಡುತ್ತಲೇ ಇರಬೇಕು. ಬೇರೆ ಬೇರೆ ರೀತಿಯ ವಿಭಿನ್ನ, ಸುಂದರ ಪಾತ್ರಗಳನ್ನು ಮಾಡುತ್ತಲೇ ಇರಬೇಕು ಎಂಬುದು ನನ್ನಾಸೆ. ಆದರೆ ರೀಚ್‌ಗೆ ದೊಡ್ಡ ಸಿನಿಮಾಗಳು ಸಹಾಯ ಮಾಡುತ್ತವೆ. ಹೀಗಾಗಿ ಆಯ್ಕೆಯಲ್ಲಿ ಸಮತೋಲನ ಕಾಯ್ದುಕೊಳ್ಳುತ್ತೇನೆ.

◆ **ಒಂದು ಸಿನಿಮಾ ಕಥೆ ನಿಮ್ಮ ಮುಂದೆ ಬಂದಾಗ, ನಿಮ್ಮ ಮೊದಲ ಆದ್ಯತೆ ಏನಾಗಿರುತ್ತದೆ?**

ಸ್ಕ್ರಿಪ್ಟ್. ಅದು ಎಷ್ಟು ಗಟ್ಟಿಯಾಗಿದೆ ಎಂಬುದೇ ಮುಖ್ಯ. ಕಥೆ ಹೇಗೆ ಹೋಗುತ್ತದೆ, ಯಾವ ಆಯಾಮವಿದೆ ಎಂದು ನೋಡುತ್ತೇನೆ. ನನ್ನ ಪಾತ್ರಕ್ಕೆ ಎಷ್ಟು ಒತ್ತು ಇದೆ ಎಂಬುದನ್ನು ಗಮನಿಸುತ್ತೇನೆ. ಒಬ್ಬೊಬ್ಬರು ಕಥೆ ಹೇಳಲು ಇನ್ನೂ ಶುರು ಮಾಡಿರುವುದಿಲ್ಲ, ಆಗಲೇ 'ನಾನೊಂದು ಸೂಪರ್ ಕಥೆ ಮಾಡಿದ್ದೇನೆ' ಎನ್ನುತ್ತಾರೆ. ಆ ಕಥೆ ನಿರಾಕರಿಸಲು ಅರ್ಹ ಎಂದು ನನಗನ್ನಿಸಿಬಿಡುತ್ತದೆ. ಅವರೇ ಸೂಪರ್ ಎಂದುಕೊಂಡರೆ ಅದನ್ನು ಮಾಡುವ ಅವಶ್ಯಕತೆಯೇ ನನಗಿಲ್ಲ ಅನಿಸುತ್ತದೆ.

ಕಥೆ ಕೇಳುವಾಗ ನನ್ನನ್ನು ನಾನು ಆ ಪಾತ್ರದಲ್ಲಿ ಕಲ್ಪಿಸಿಕೊಳ್ಳಬೇಕು. ಆ ಕಲ್ಪನೆ ನನಗೆ ಖುಷಿ, ತೃಪ್ತಿ ನೀಡಿತು ಎಂದರೆ, ಅದಕ್ಕೆ ನಾನು ಸಿದ್ಧಳಾಗುತ್ತೇನೆ. ಪಾತ್ರ ಹಾಗೂ ಕಥೆಯ ತೂಕ ಇವಕ್ಕೆ ಮೊದಲ ಆದ್ಯತೆ. ಹಣದ ಬಗ್ಗೆ ಅಂತಿಮ ಹಂತದಲ್ಲಿ ನೋಡುತ್ತೇನೆ. ಅದನ್ನೇ ಮೊದಲು ತಂದರೆ ಒಳ್ಳೆಯ ಸ್ಕ್ರಿಪ್ಟ್‌ಗಳನ್ನು ಆಯ್ಕೆ ಮಾಡಲು ಸಾಧ್ಯವಿಲ್ಲ ಅನ್ನಿಸುತ್ತದೆ.

◆ **ಥಿಯೇಟರ್‌ಗಳಿಗೆ ಜನ ಬರುತ್ತಿಲ್ಲ ಎಂಬ ಕೂಗು ಈ ನಡುವೆ ಕನ್ನಡ ಸಿನಿಮಾರಂಗದಲ್ಲಿ ಜೋರಾಗಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ?**

ಒಬ್ಬ ನಟಿಯಾಗಿ, ಸಿಕ್ಕ ಸಿನಿಮಾಗಳನ್ನು ಪ್ರಾಮಾಣಿಕತೆಯಿಂದ ಮಾಡುವುದು ನನ್ನ ಕೈಲಾಗುವ ಕೆಲಸ. ಅದನ್ನು ಖಂಡಿತ ಮಾಡುತ್ತೇನೆ. ಈಗಿನ ಸಿನಿಮಾಗಳು ಕೂಡ ಒಂದಕ್ಕೊಂದು ಪೈಪೋಟಿ ನೀಡುವಂತಿವೆ. ಆದಾಗ್ಯೂ ಇನ್ನೂ ಹೆಚ್ಚು ಕ್ರಿಯಾಶೀಲತೆ, ಗುಣಮಟ್ಟ, ಹೊಸ ಜಾನರ್‌ಗಳ ಅವಶ್ಯಕತೆಯಿದೆ. ವ್ಯರ್ಥ ಪ್ರಯತ್ನದಿಂದ ಫಲವಿಲ್ಲ. ಪ್ರಾಮಾಣಿಕ ಪರಿಶ್ರಮವಿದ್ದರೆ ಖಂಡಿತ ಗೆಲ್ಲುತ್ತದೆ ಎನ್ನುವ ಭಾವನೆ ನನ್ನದು.

◆ **ಸದ್ಯ ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?**

ಹರಿ ಎಂಬ ಹೊಸ ನಿರ್ದೇಶಕರು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಮಾಡುತ್ತಿದ್ದಾರೆ. ಅದರಲ್ಲಿ ನಟಿಸುತ್ತಿದ್ದೇನೆ. ಬಹುತಾರಾಗಣದ 'ಉತ್ತರಕಾಂಡ' ಸಿನಿಮಾದಲ್ಲಿದ್ದೇನೆ. ಎರಡು ತಮಿಳು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೇನೆ. ಕನ್ನಡದಲ್ಲಿ ಇನ್ನೂ ಕೆಲವು ಸಿನಿಮಾಗಳು ಮಾತುಕತೆಯಲ್ಲಿವೆ. ■



# ಭೈರವನಾಗಿ ಶಿವಣ್ಣನ ಖದರ್

**ಸೆಂಚುರಿ ಸ್ಟಾರ್** ಶಿವರಾಜ್ ಕುಮಾರ್, ನಿರ್ದೇಶಕ ಹೇಮಂತ ರಾವ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ 'ಭೈರವನ ಕೊನೆ ಪಾಠ' ಸಿನಿಮಾ, ಶಿವಣ್ಣನ ಅಭಿಮಾನಿಗಳಲ್ಲಿ, ಜೊತೆಗೆ ಚಂದನವನದಲ್ಲೂ ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕಿದೆ.

ಈ ನಿರೀಕ್ಷೆಗೆ ಶಿವಣ್ಣ–ಹೇಮಂತ್ ಕಾಂಬಿನೇಷನ್ ಮುಖ್ಯ ಕಾರಣವಾದರೆ, ಕಥೆ ಮತ್ತೊಂದು ಕಾರಣ. 12ನೇ ಶತಮಾನದಲ್ಲಿ ನಡೆಯುವ ಒಂದು ಕಾಲ್ಪನಿಕ ಕಥೆಯಲ್ಲಿ ಭೈರವ ಎಂಬ ಪಾತ್ರಕ್ಕೆ ಶಿವರಾಜ್‌ಕುಮಾರ್ ಜೀವ ತುಂಬುತ್ತಿದ್ದಾರೆ. ಈಚೆಗೆ ಯುದ್ಧದ ಪೋಷಾಕಿನಲ್ಲಿರುವ ಶಿವಣ್ಣನ ಫಸ್ಟ್‌ಲುಕ್ ರಿಲೀಸ್ ಆಗಿದ್ದು, ಕುತೂಹಲ ಹುಟ್ಟುಹಾಕಿದೆ.

ಈ ಕುತೂಹಲ ಕಾಯ್ದುಕೊಳ್ಳುವುದೇ ದೊಡ್ಡ ಸವಾಲು ಎಂದಿದ್ದಾರೆ ನಿರ್ದೇಶಕ ಹೇಮಂತ್. 'ಇದು ನನ್ನ ಮಹತ್ವಾಕಾಂಕ್ಷೆಯ ಸಿನಿಮಾ. ನಾನು ಚಿಕ್ಕಂದಿನಿಂದ ನೋಡಿ ಬೆಳೆದ ಸೂಪರ್‌ಸ್ಟಾರ್‌ಗೆ ನಿರ್ದೇಶಿಸುತ್ತಿರುವುದು ಸವಾಲನ್ನು ಹತ್ತು ಪಟ್ಟು ಹೆಚ್ಚಾಗಿಸಿದೆ. ಶಿವಣ್ಣನ ಜೊತೆ ಕೆಲಸ ಮಾಡಬೇಕೆಂಬುದು ಪ್ರತಿ ನಿರ್ದೇಶಕರ ಆಸೆ. ಅವರ ಉತ್ಸಾಹ, ಹುರುಪು ಎಂಥವರನ್ನೂ ಆವರಿಸಿಕೊಳ್ಳುವಂಥದ್ದು' ಎಂದಿದ್ದಾರೆ.

> ಶಿವಣ್ಣನ ಜೊತೆ ಕೆಲಸ ಮಾಡಬೇಕೆಂಬುದು ಪ್ರತಿ ನಿರ್ದೇಶಕರ ಆಸೆ. ಅವರ ಉತ್ಸಾಹ ಎಂಥವರನ್ನೂ ಆವರಿಸಿಕೊಳ್ಳುವಂಥದ್ದು.
> —ಹೇಮಂತ್ ರಾವ್

ಶಿವಣ್ಣನ ಉತ್ಸಾಹದ ಬಗ್ಗೆ ಮತ್ತಷ್ಟು ಮಾತನಾಡುತ್ತಾ, 'ಇಡೀ ದಿನ ಬೆಟ್ಟದ ಮೇಲೆ ಫೋಟೊಶೂಟ್ ನಡೆಯಿತು. ಹವಾಮಾನ ನಮ್ಮ ಪರವಾಗಿರಲಿಲ್ಲ. ಹೀಗಿದ್ದರೂ ಇಡೀ ದಿನ ಅವರು ಶೂಟ್‌ನಲ್ಲಿದ್ದದ್ದು ನೋಡಿ ತಂಡದವರಿಗೂ ಅಚ್ಚರಿಯಾಗಿತ್ತು. ಈ ವಯಸ್ಸಿನಲ್ಲೂ ಬೆಟ್ಟವನ್ನು ಸರಸರನೆ ಹತ್ತಿದರು' ಎಂದು ಹಾಡಿ ಹೊಗಳಿದ್ದಾರೆ.

ಶಿವಣ್ಣ ಕೂಡ ಭೈರವನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಖುಷಿಯಾಗಿದ್ದಾರೆ. ಐತಿಹಾಸಿಕ ಪಾತ್ರ ಎನ್ನುತ್ತಿದ್ದಂತೆ ತಮ್ಮ ತಂದೆಯ ನೆನಪನ್ನೂ ಮಾಡಿಕೊಂಡಿದ್ದಾರೆ. 'ಅಪ್ಪಾಜಿ ಇಂಥ ಪಾತ್ರಗಳನ್ನು ನಿಭಾಯಿಸುವುದರಲ್ಲಿ ನಿಸ್ಸೀಮರಾಗಿದ್ದರು. ಈ ಪಾತ್ರಗಳಿಂದಲೇ ಜನರ ಪ್ರೀತಿ ಗಳಿಸಿದ್ದರು ಕೂಡ' ಎಂದು ಭಾವುಕರಾಗಿದ್ದಾರೆ. ■